ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸಂಖ್ಯೆ:ಯುಸೇಇ/ರಾಸೇಯೋ/19/2021/2024-25/73

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 24.06.2024

ಇವರಿಗೆ,

ಕುಲ ಸಚಿವರು
ಎಲ್ಲಾ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳು

ಮಾನ್ಯರೇ,

ವಿಷಯ: ಎನ್. ಎಸ್. ಎಸ್. ಘಟಕಗಳನ್ನು ಹೆಚ್ಚಿಸುವ ಕುರಿತಾಗಿ ಮಾಹಿತಿಯನ್ನು ಸಲ್ಲಿಸುವ ಕುರಿತು

ಉಲ್ಲೇಖ: ನವದೆಹಲಿಯ ಎನ್. ಎಸ್. ಎಸ್. ನಿರ್ದೇಶನಾಲಯದಲ್ಲಿ ರಾಜ್ಯ ಎನ್. ಎಸ್. ಎಸ್. ಅಧಿಕಾರಿಗಳಿಗೆ ನಡೆದ ಸಭೆ, ದಿನಾಂಕ: 20.06.2024

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೇಲಿನ ಉಲ್ಲೇಖದನ್ವಯ ನಡೆದ ಸಭೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯ ಎನ್. ಎಸ್. ಎಸ್. ಕೋಶಕ್ಕೆ ಎನ್. ಎಸ್. ಎಸ್. ಸ್ವಯಂ ಸೇವಕ/ಸೇವಕಿಯರ ಸಂಖ್ಯಾಬಲವನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ. ಅದರಂತೆ ರಾಜ್ಯದಲ್ಲಿ ಈಗಾಗಲೇ ಎನ್. ಎಸ್. ಎಸ್. ಅನುಷ್ಠಾನಗೊಂಡಿರುವ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳಲ್ಲಿ ಎನ್. ಎಸ್. ಎಸ್. ಘಟಕಗಳನ್ನು ಹೆಚ್ಚಿಸಲು ಯೋಜಿಸಲಾಗಿದ್ದು, ಈ ಕುರಿತು ಕೆಳಕಂಡ ಅಂಶಗಳನ್ನು ಪರಿಗಣಿಸಲು ಕೋರಿದೆ.

- **ಹಲವು ವಿಶ್ವವಿದ್ಯಾಲಯ/ನಿರ್ದೇಶನಾಲಯಗಳಲ್ಲಿ ಎನ್. ಎಸ್. ಎಸ್. ನ್ನು ಪಠ್ಯಕ್ರಮವನ್ನಾಗಿ ಅಳವಡಿಸಲಾಗಿದ್ದು, ಈಗಾಗಲೇ 1 ಎನ್. ಎಸ್. ಎಸ್. ಘಟಕಗಳನ್ನು ಹೊಂದಿರುವ ಕಾಲೇಜುಗಳು 2 ಅಥವಾ 3 ಎನ್. ಎಸ್. ಎಸ್. ಘಟಕಗಳನ್ನು ಹೊಂದಲು ಅವಕಾಶವಿರುತ್ತದೆ.**
- **ಪ್ರಸ್ತುತ ಸ್ವ-ಆರ್ಥಿಕ ಎನ್. ಎಸ್. ಎಸ್. ಘಟಕ ಹೊಂದಿರುವ ಕಾಲೇಜುಗಳು ಅವುಗಳನ್ನು ಆರ್ಥಿಕ ಘಟಕಗಳನ್ನಾಗಿ ಪರಿವರ್ತಿಸಲು ಅವಕಾಶವಿರುತ್ತದೆ.**

ಆದ್ದರಿಂದ, **ತಮ್ಮ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳಲ್ಲಿ ಎನ್. ಎಸ್. ಎಸ್. ಘಟಕಗಳನ್ನು ಹೆಚ್ಚಿಸುವ ಕುರಿತಾಗಿ, ಈ ಕೆಳಕಂಡ ನಿಗದಿತ ನಮೂನೆಯಂತೆ ಮಾಹಿತಿಯನ್ನು ಜುಲೈ 10ರೊಳಗೆ ಈ ಕಛೇರಿಗೆ ಸಲ್ಲಿಸಲು ಕೋರಲಾಗಿದೆ.**

| ವಿಶ್ವವಿದ್ಯಾಲಯ/ ನಿರ್ದೇಶನಾಲಯ | ಪ್ರಸ್ತುತ ಹೊಂದಿರುವ ಅನುದಾನಿತ ಎನ್. ಎಸ್. ಎಸ್. ಘಟಕಗಳ ಸಂಖ್ಯೆ | ಪ್ರಸ್ತುತ ಹೊಂದಿರುವ ಸ್ವ-ಆರ್ಥಿಕ ಎನ್. ಎಸ್. ಎಸ್. ಘಟಕಗಳ ಸಂಖ್ಯೆ | ಹೆಚ್ಚುವರಿಯಾಗಿ ಬೇಕಾಗಿರುವ ಎನ್. ಎಸ್. ಎಸ್. ಘಟಕಗಳ ಸಂಖ್ಯೆ |
|---|---|---|---|
| | | | |

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ.ಪ್ರತಾಪ್ ಲಿಂಗಯ್ಯ)
ರಾಜ್ಯ ಎನ್.ಎಸ್.ಎಸ್.ಅಧಿಕಾರಿ,
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಪ್ರತಿ: 1. ಮಾನ್ಯ ಸರ್ಕಾರದ ಅಪರ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ
2. ಪ್ರಾದೇಶಿಕ ನಿರ್ದೇಶಕರು, ಎನ್.ಎಸ್.ಎಸ್. ಪ್ರಾದೇಶಿಕ ಕಛೇರಿ, ಭಾರತ ಸರ್ಕಾರ, ಬೆಂಗಳೂರು.
3. ಎನ್. ಎಸ್. ಎಸ್. ಕಾರ್ಯಕ್ರಮ ಸಂಯೋಜನಾಧಿಕಾರಿಗಳು, ಎಲ್ಲಾ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳು
**(ಮಾಹಿತಿ ಮತ್ತು ಮುಂದಿನಕ್ರಮಕ್ಕಾಗಿ)**